# ಈ ಲೇಖನದ ವಿಷಯಾನುಕ್ರಮಣಿಕೆ


ಗಣಪತಿಪೂಜೆಯ ಸಿದ್ಧತೆ 2

ಮಣ್ಣಿನ ಗಣಪತಿಯ ವಿಗ್ರಹ 3

ಲೋಹದ ಗಣಪತಿಯ ವಿಗ್ರಹ 4

ಮಂಟಪ 5

ಪೂಜಾಸಾಮಗ್ರಿಗಳು 6

ಕಮಂಡಲು, ಪಾತ್ರೆ, ವಸ್ತ್ರ 7

ಪೂಜಾಕಲಶ 8

ಪಂಚಾಮೃತದ ಪದಾರ್ಥಗಳು 8

ನಿರ್ಮಾಲ್ಯ ಹೂ, ತುಳಸಿ, ಗರಿಕೆ, ಗಂಧಾಕ್ಷತೆ 9

ಅನಿರ್ಮಾಲ್ಯ ಹೂಗಳು 10

ಎರಡು ಕೆಂಪು ವಸ್ತ್ರ 11

ಯಜ್ಞೋಪವೀತ 12

ನೈವೇದ್ಯದ ಪದಾರ್ಥಗಳು 13

ವಾಯನದಾನ 14

ಪುರೋಹಿತರಿಗೆ ದಕ್ಷಿಣಾದಾನ 15

ಸಮಾರಾಧನೆ 16

ಸಾಯಂಪೂಜೆ 17

ವಿಸರ್ಜನೆ 18

## ಗಣಪತಿಪೂಜೆಯ ಸಿದ್ಧತೆ

ಭಾದ್ರಪದಮಾಸದ ಶುಕ್ಲಪಕ್ಷದ ಚತುರ್ಥಿಯಂದು ಮಾಡಬೇಕಾದ ಪೂಜೆಯ ಕ್ರಮವನ್ನು ಮುಂದಿನ ಲೇಖನ-ಉಪನ್ಯಾಸಗಳಲ್ಲಿ  ವಿವರಿಸುತ್ತೇನೆ.

ಪೂಜೆಗೆ ಕೂಡುವದಕ್ಕಿಂತ ಮುಂಚೆ ಮಾಡಿಕೊಂಡಿರಬೇಕಾದ ಸಿದ್ಧತೆಗಳನ್ನು ಈ ಲೇಖನದಲ್ಲಿ ತಿಳಿಸುತ್ತೇನೆ.

ಹಿಂದಿನ ದಿವಸವೇ ಪೂಜೆಯ ಕ್ರಮವನ್ನು ಒಮ್ಮೆ ಪೂರ್ಣವಾಗಿ ಕೇಳಿ. ಆ ನಂತರ ತಯಾರಿ ಮಾಡಿಕೊಳ್ಳಲು ಅತ್ಯಂತ ಸುಲಭವಾಗುತ್ತದೆ. ಪೂಜೆಯ ಸಮಯದಲ್ಲಿ ಆ ಪದಾರ್ಥವಿಲ್ಲ, ಈ ಪದಾರ್ಥವಿಲ್ಲ ಎಂದು ಮನೆಯವರ ಮೇಲೆ ಕೋಪಗೊಳ್ಳಬಾರದು. ಭಕ್ತಿ ಶ್ರದ್ಧೆಗಳಿಂದ ಎಲ್ಲವನ್ನೂ ಮೊದಲೇ ಸಿದ್ಧ ಪಡಿಸಿಟ್ಟುಕೊಳ್ಳಬೇಕು.

ಪಂಚಪಾತ್ರೆ, ಉದ್ಧರಣೆಯಂತಹ ಶಬ್ದಗಳು ಅರ್ಥವಾಗದಿದ್ದಲ್ಲಿ ಮನೆಯ ಹಿರಿಯರನ್ನು ಕೇಳಿ ಅಥವಾ ತಿಳಿದವರ ಮನೆಗೆ ಹೋಗಿ ತಿಳಿದುಕೊಳ್ಳಬೇಕು.

ತಂದೆತಾಯಿಯರು ಈ ಸಿದ್ಧತೆಯನ್ನು ಮಾಡಿಕೊಳ್ಳುವಾಗ ಮಕ್ಕಳನ್ನು ಕೂಡಿಸಿಕೊಳ್ಳಿ. ಇದರಿಂದ ಅವರಿಗೂ ಸಹಜವಾಗಿ ಶಿಕ್ಷಣ ದೊರೆಯುತ್ತದೆ.

## ಮಣ್ಣಿನ ಗಣಪತಿಯ ವಿಗ್ರಹ

### ಪ್ರಧಾನ ಪೂಜೆಯನ್ನು ಸಲ್ಲಿಸಲು ಶುದ್ಧವಾದ ಮಣ್ಣಿನಿಂದ ನಿರ್ಮಾಣವಾದ ಗಣಪತಿಯ ವಿಗ್ರಹ

ಬಂಗಾರ, ಬೆಳ್ಳಿ, ಪಂಚಲೋಹದ ಹೀಗೆ ತನ್ನ ಶಕ್ತಿಗೆ ಅನುಸಾರವಾಗಿ ಪ್ರತಿಮೆಯನ್ನು ಮಾಡಿಸಿ ಅದನ್ನು ಜ್ಞಾನಿಗಳಿಗೆ ದಾನ ನೀಡುವದನ್ನೂ ಶಾಸ್ತ್ರ ವಿಧಿಸಿದೆ.

ಮಣ್ಣಿನ ಗಣಪತಿಯ ಪೂಜೆ ಸಂಪ್ರದಾಯಪ್ರಾಪ್ತ-ವಾಗಿದೆ. ವಿಶೇಷ ಅಭೀಷ್ಟಗಳಿಗಾಗಿ ಲೋಹದ ಪ್ರತಿಮೆಯನ್ನು ಮಾಡಿಸಿ ದಾನ ನೀಡಬೇಕು.

## ಲೋಹದ ಗಣಪತಿಯ ವಿಗ್ರಹ

ಪ್ರತೀ ಸತ್ಕರ್ಮದ, ಪೂಜೆಯ ಆರಂಭದಲ್ಲಿ ಗಣಪತಿಯ ಪೂಜೆ ಇರುವಂತೆ ಗಣಪತಿಯ ಪೂಜೆಯಲ್ಲಿಯೂ ಆರಂಭದಲ್ಲಿ ಗಣಪತಿಯನ್ನು ಪೂಜಿಸಲೇಬೇಕು. ಈ ಪೂಜೆಯನ್ನು ಮಾಡಲು ಮತ್ತು ಪಂಚಾಮೃತದ ಅಭಿಷೇಕ ಮಾಡಲು ಪ್ರತೀನಿತ್ಯ ಮನೆಯಲ್ಲಿ ಪೂಜಿಸುವ ಗಣಪತಿಯ ವಿಗ್ರಹವನ್ನೇ ಬಳಸಿ ಮತ್ತೆ ಅದನ್ನು ಪ್ರತೀನಿತ್ಯದಲ್ಲಿ ಮನೆಯಲ್ಲಿ ಪೂಜಿಸಬೇಕು.

ಮನೆಯಲ್ಲಿ ಲೋಹದ ಗಣಪತಿಯ ಪೂಜೆಯೇ ಇಲ್ಲದಿದ್ದರೆ ಅಡಿಕೆ ಅಥವಾ ಅರಿಶಿನದ ಕೊಂಬಿನಲ್ಲಿ ಗಣಪತಿಯನ್ನು ಆರಂಭದಲ್ಲಿ ಪೂಜಿಸಬೇಕು. ಪಂಚಾಮೃತವನ್ನು ಮಣ್ಣಿನ ಗಣಪತಿಗೆ ಪ್ರೋಕ್ಷಿಸಬೇಕು. ಅಭಿಷೇಕ ಮಾಡಬಾರದು.

ಮನೆಯಲ್ಲಿ ಗಣಪತಿಯ ವಿಗ್ರಹ ಇಲ್ಲದೇ ಇರುವವರು ಲಕ್ಷಣಭರಿತವಾದ ಒಂದು ವಿಗ್ರಹವನ್ನು ತಂದು, ಗಣಪತಿಯ ಹಬ್ಬದಂದು ಪೂಜಿಸಿ ಆ ನಂತರ ಪ್ರತೀನಿತ್ಯವೂ ಪೂಜಿಸಬೇಕು.

## ಮಂಟಪ

ಗಣಪತಿಯ ವಿಗ್ರಹವನ್ನಿಟ್ಟು ಪೂಜಿಸಲು ಉತ್ತಮವಾದ ಮಂಟಪವನ್ನು ನಿರ್ಮಿಸಬೇಕು. ಗೌರಿಯ ಪೂಜೆಯನ್ನು ಮಾಡಿದ್ದಲ್ಲಿ ಗೌರಿಯ ಮಂಟಪಕ್ಕಿಂತ ಎತ್ತರದ ಮಂಟಪವನ್ನು ನಿರ್ಮಿಸಬಾರದು.

ಉತ್ತಮವಾದ ಮಂಟಪವನ್ನು ನಿರ್ಮಾಣ ಮಾಡಿ ಬಾಳೆಯ ಕಂಬಗಳಿಂದ, ಮಾವಿನ ಸೊಪ್ಪಿನಿಂದ, ಹೂಗಳಿಂದ ಅದನ್ನು ಅಲಂಕರಿಸಬೇಕು.

ಮಂಟಪದ ಮಧ್ಯಭಾಗದಲ್ಲಿ ಒಂದು ಹರಿವಾಣದಲ್ಲಿ (ಪೂಜೆಯ ತಟ್ಟೆಯನ್ನು ಹರಿವಾಣ ಎನ್ನುತ್ತಾರೆ) ಅಕ್ಕಿಯನ್ನು ಹಾಕಿ ಅರಿಶಿನದ ಕೊಂಬು, ಅಡಿಕೆಗಳನ್ನಿಟ್ಟು ಅದರ ಮೇಲೆ ಮಧ್ಯಭಾಗದಲ್ಲಿ ಮಣ್ಣಿನ ಗಣಪತಿಯನ್ನಿಡಬೇಕು.

ಆ ಗಣಪತಿಯ ಮುಂಭಾಗದಲ್ಲಿ ಲೋಹದ ಗಣಪತಿಯನ್ನಿಡಬೇಕು.

## ಪೂಜಾಸಾಮಗ್ರಿಗಳು

ಅರಿಶಿನ, ಕುಂಕುಮ, ಮಂತ್ರಾಕ್ಷತೆ, ಗೆಜ್ಜೆವಸ್ತ್ರ[1], ಗಂಟೆ, ಜಾಗಟೆ, ದೀಪ, ಧೂಪಗಳು.

ಮನೆಯಲ್ಲಿ ಹೆಣ್ಣುಮಕ್ಕಳು ಹಚ್ಚಿಕೊಳ್ಳುವ ಅರಿಶಿನ ಕುಂಕುಮ, ಮನೆಗೆ ಬಂದ ಸುವಾಸಿನಿಯರಿಗೆ ನೀಡುವ ಅರಿಶಿನ ಕುಂಕುಮ ಇವುಗಳನ್ನು ಪೂಜೆಗೆ ಬಳಸುವಂತಿಲ್ಲ. ಪೂಜೆಗೆ ಬಳಸಿ ಉಳಿದದ್ದನ್ನು ಹೆಣ್ಣುಮಕ್ಕಳು ಬಳಸಬೇಕು. ಹೀಗಾಗಿ ಪರಿಶುದ್ಧವಾದ ಯಾರೂ ಬಳಸದೇ ಇರುವ ಅರಿಶಿನ ಕುಂಕುಮಗಳನ್ನು ಪೂಜೆಗಾಗಿ ಇಡಬೇಕು.

**ಪೂಜೆ ಮಾಡುವವರು ಆಚಮನ ಮಾಡಲು ಆಚಮನದ ೩ ಪಾತ್ರೆಗಳು** (ಉದ್ಧರಣೆ, ಪಂಚಪಾತ್ರೆ ಮತ್ತು ನೀರು ವಿಸರ್ಜಿಸಲು ಮತ್ತೊಂದು ಪಾತ್ರೆ)

---

[1] ಗೆಜ್ಜೆವಸ್ತ್ರದಲ್ಲಿ 21 ಗೆಜ್ಜೆಗಳ 21 ಎಳೆಗಳಿರಬೇಕು. ಆಚೆಯ ಮತ್ತು ಈಚೆಯ ಬದಿಯಲ್ಲಿ ಎರಡು ದುಂಡಗಿನ ಹತ್ತಿಯನ್ನ ವಸ್ತ್ರ ಎನ್ನುತ್ತಾರೆ. ರೇಶಿಮೆಯ ವಸ್ತ್ರವನ್ನು ಸಮರ್ಪಿಸಲು ಸಾಧ್ಯವಿಲ್ಲದಿದ್ದಲ್ಲಿ ಇದನ್ನಾದರೂ ಮಾಡಿ ಸಮರ್ಪಿಸಬೇಕು. ಎರಡು ಗೆಜ್ಜೆಗಳ ಮಧ್ಯದಲ್ಲಿ ಸಿಂಧೂರವನ್ನು ಲೇಪಿಸಬೇಕು. (ಸಾಮಾನ್ಯವಾಗಿ ಬೇರೆ ದೇವತೆಗಳ ಪೂಜೆಯಲ್ಲಿ ಅರಿಶಿನವನ್ನು ಲೇಪಿಸುತ್ತೇವೆ. ಕೆಂಪು ಬಣ್ಣ ಗಣಪತಿಗೆ ಪ್ರಿಯ ಎನ್ನುವ ಕಾರಣಕ್ಕೆ ಸಿಂಧೂರದ ಲೇಪನ)

# ಕಮಂಡಲು, ಪಾತ್ರೆ, ವಸ್ತ್ರ

## ಕಮಂಡಲು ಮತ್ತು ಕೈತೊಳೆಯಲು ಒಂದು ಪಾತ್ರೆ. ಕೈ ವರೆಸಿಕೊಳ್ಳಲು ಶುದ್ಧ ವಸ್ತ್ರ.

ಪೂಜೆ ಮಾಡುವ ಸಂದರ್ಭದಲ್ಲಿ ನಮ್ಮ ಕೈಗಳು ಪರಿಪೂರ್ಣವಾಗಿ ಶುದ್ಧವಿರಬೇಕು. ಆದರೆ ಅನಿವಾರ್ಯವಾಗಿ ನಮ್ಮ ಮೈ ಮುಟ್ಟಿಕೊಂಡಾಗ, ಅಥವಾ, ಮಣೆ, ನೆಲ, ಪೀಠ ವರೆಸುವ ಬಟ್ಟೆ ಮುಂತಾದ ಪದಾರ್ಥಗಳನ್ನು  ಮುಟ್ಟಿದಾಗ ಅದೇ ಕೈಯಿಂದಲೇ ದೇವರ ಪೂಜೆಯನ್ನು ಮಾಡಬಾರದು. ಹೀಗಾಗಿ ಅವನ್ನು ಮುಟ್ಟಿದ ನಂತರ ಕಮಂಡಲುವಿನಿಂದ ಕೈಗಳನ್ನು ತೊಳೆದುಕೊಂಡು, ಆ ಕಮಂಡಲುವಿನ ಪಕ್ಕದಲ್ಲೆ ಇಟ್ಟಿರುವ ಶುದ್ಧ ವಸ್ತ್ರದಿಂದ ಕೈಗಳನ್ನು ವರೆಸಿಕೊಂಡು ದೇವರ ಪೂಜೆಯನ್ನು ಮುಂದುವರೆಸಬೇಕು.  ಶ್ರೀಮದುಡುಪಿಯ ಮಠಗಳ ಸ್ವಾಮಿಗಳು ಈ ಶ್ರೇಷ್ಠ ನಿಯಮವನ್ನು ಪಾಲಿಸುತ್ತಾರೆ. ಅವರ ಮಾಡುವ ಪೂಜೆಯನ್ನು ನೋಡುವಾಗ, ಯಾವಯಾವ ಸಂದರ್ಭದಲ್ಲಿ

ಅವರು ಕೈತೊಳೆದುಕೊಳ್ಳುತ್ತಾರೆ ಎನ್ನುವದನ್ನು ಗಮನಿಸಿ ಕಲಿಯಬೇಕು.

## ಪೂಜಾಕಲಶ

ಗಣಪತಿಯ ಪೂಜೆಯ ನೀರಿಗಾಗಿ ಒಂದು ಬೆಳ್ಳಿಯ/ತಾಮ್ರದ ಕಲಶ. ಗಣಪತಿಗೆ ಅರ್ಘ್ಯದಿಂದ ಆರಂಭಿಸಿ ನಮಸ್ಕಾರದವರೆಗಿನ ಷೋಡಶ ಉಪಚಾರಗಳನ್ನು ಈ ಕಲಶೋದಕದಿಂದಲೇ ಅರ್ಪಿಸಬೇಕು.

## ಪಂಚಾಮೃತದ ಪದಾರ್ಥಗಳು

ಹಾಲು, ಮಜ್ಜಿಗೆ[2] ತುಪ್ಪ, ಜೇನುತುಪ್ಪ, ಸಕ್ಕರೆ ಮತ್ತು ಸುಲಿದ ಹಣ್ಣುಗಳನ್ನು ಒಂದೊಂದು ಪ್ರತ್ಯೇಕ ಪಾತ್ರೆಯಲ್ಲಿಟ್ಟುಕೊಳ್ಳಬೇಕು.

---

[2] ಮೊಸರಿನ ವ್ರತ ನಡೆಯುತ್ತಿರುವದರಿಂದ, ಮೊಸರನ್ನು ಚನ್ನಾಗಿ ಕಡೆದು, ಅದರಲ್ಲಿನ ಬೆಣ್ಣೆಯ ಅಂಶವನ್ನು ಪೂರ್ಣವಾಗಿ ತೆಗೆದ ನಂತರ ಉಳಿಯುವ ದ್ರವ ಪದಾರ್ಥ ಮಜ್ಜಿಗೆ ಎಂದು ಕರೆಸಿಕೊಳ್ಳುತ್ತದೆ. ಮೊಸರಿಗೆ ನೀರು ಹಾಕಿ ಮಾಡಿದ ಮಜ್ಜಿಗೆಯನ್ನು ಅಭಿಷೇಕ ಮಾಡಬಾರದು.

## ನಿರ್ಮಾಲ್ಯ ಹೂ, ತುಳಸಿ, ಗರಿಕೆ, ಗಂಧಾಕ್ಷತೆ

ದೇವರಿಗೆ ಸಮರ್ಪಿಸಿದ ಹೂ ಮುಂತಾದ ಪದಾರ್ಥಗಳಿಗೆ ನಿರ್ಮಾಲ್ಯ ಎಂದು ಹೆಸರು.

ಬೆಳಿಗ್ಗೆ ದೇವರ ಪೂಜೆಯನ್ನು ಮುಗಿಸಿ ದೇವರಿಗೆ, ಲಕ್ಷ್ಮೀದೇವಿಗೆ, ಮುಖ್ಯಪ್ರಾಣದೇವರಿಗೆ ಮತ್ತು ಭಾರತೀದೇವಿಗೆ ಸಮರ್ಪಿಸಿರುವ ಹೂ, ತುಳಸಿ, ಗರಿಕೆ, ಗಂಧ ಅಕ್ಷತೆಗಳನ್ನು ಇಟ್ಟುಕೊಳ್ಳಬೇಕು. ದೇವರಿಗೆ ಸಮರ್ಪಿಸದ್ದನ್ನು  ಯಾವುದೇ ದೇವತೆಗೂ ಸಮರ್ಪಿಸಬಾರದು. ದೇವರಿಗೆ ಸಮರ್ಪಿಸಿಯೇ ದೇವತೆಗಳಿಗೆ ಸಮರ್ಪಿಸಬೇಕು.

ತುಳಸಿಯನ್ನು ಸಾಕ್ಷಾತ್ತಾಗಿ (ಗಿಡದಿಂದ ಬಿಡಿಸಿ ತಂದು) ಯಾವುದೇ ದೇವತೆಗೂ ಸಮರ್ಪಿಸಬಾರದು. ಪರಮಾತ್ಮನಿಗೆ ಮಾತ್ರ ಸಮರ್ಪಿಸಬೇಕು. ಪರಮಾತ್ಮನಿಗೆ ಸಮರ್ಪಿಸಿದ ಆ ತುಳಸಿಯನ್ನು ತೆಗೆದುಕೊಂಡು ಉಳಿದ ದೇವತೆಗಳಿಗೆ ಸಮರ್ಪಿಸಬೇಕು.

ಶಿವನಿಗೆ, ಗಣಪತಿಗೆ ತುಳಸಿಯನ್ನು ಸಮರ್ಪಿಸಬಾರದು ಎನ್ನುವದು ಒಂದು

ಭ್ರಾಂತಿಯಷ್ಟೇ. ಪರಮಾತ್ಮನ ನಿರ್ಮಾಲ್ಯವಾದ ತುಳಸಿಯನ್ನು ಸಮರ್ಪಿಸಲೇಬೇಕು. ದೇವರ ನಿರ್ಮಾಲ್ಯವಾದ ತುಳಸಿಯನ್ನು ಸಮರ್ಪಿಸುವದರಿಂದ ಗಣಪತಿ ಎಷ್ಟು ಅನುಗ್ರಹ ಮಾಡುತ್ತಾನೆಯೋ ಅಷ್ಟು ಅನುಗ್ರಹವನ್ನು ಯಾವ ಹೂಗಳನ್ನು ಸಮರ್ಪಿಸಿದರೂ ಮಾಡುವದಿಲ್ಲ. ಹೀಗಾಗಿ ಗಣಪತಿಗೆ ಅವಶ್ಯವಾಗಿ ದೇವರ ನಿರ್ಮಾಲ್ಯದ ತುಳಸಿಯನ್ನು ಸಮರ್ಪಿಸಬೇಕು.

## ಅನಿರ್ಮಾಲ್ಯ ಹೂಗಳು

ಮೇಲೆ ಹೇಳಿದ ನಿರ್ಮಾಲ್ಯವನ್ನು ಗಣಪತಿಯನ್ನು ಅರ್ಚಿಸಲು ಉಪಯೋಗಿಸಬೇಕು. ಆದರೆ ಪೂಜೆಯಲ್ಲಿ ಗಣಪತಿಯ ಕಾಲುಗಳನ್ನೂ ಪೂಜಿಸಬೇಕು. ಇತರ ದೇವತೆಗಳ ಕಾಲನ್ನು ಪೂಜಿಸಬೇಕಾದರೆ ದೇವರ ನಿರ್ಮಾಲ್ಯವನ್ನು ಉಪಯೋಗಿಸಬಾರದು. ಹೀಗಾಗಿ ಪಾದಪೂಜೆಯನ್ನು ಮಾಡಲೋಸುಗ ಸ್ವಲ್ಪ **ಅನಿರ್ಮಾಲ್ಯ ಪುಷ್ಪಗಳನ್ನು** ಇಟ್ಟುಕೊಂಡಿರಬೇಕು. **ಕೊಂಡು ತಂದ ಹೂಗಳಿಂದ ಸರ್ವಥಾ ಪೂಜೆಯನ್ನು**

**ಮಾಡಬೇಡಿ. ಅದರಿಂದ ಮಹತ್ತರ ಅನರ್ಥವುಂಟಾಗುತ್ತದೆ.**

## ಎರಡು ಕೆಂಪು ವಸ್ತ್ರ

ದೇವರು ಶಕ್ತಿ ನೀಡಿದ್ದರೆ ಕೆಂಪುಬಣ್ಣದ ರೇಶಿಮೆಯ ಎರಡು ಸಣ್ಣ ವಸ್ತ್ರಗಳನ್ನು (ಪ್ರತಿಮೆಯ ಅಳತೆಗೆ ತಕ್ಕದಾದದ್ದು) ಗಣಪತಿಗೆ ಸಮರ್ಪಿಸಲು ಇಟ್ಟುಕೊಳ್ಳಬೇಕು. ಒಂದು ವಸ್ತ್ರವನ್ನು ಸಮರ್ಪಿಸಬಾರದು. ಉಡಲು ಮತ್ತು ಹೊದೆಯಲು ಹೀಗೆ ಎರಡು ಇರಲೇಬೇಕು.

ಗಣಪತಿಯ ಪೂಜೆ ಮುಗಿದ ನಂತರ ಈ ವಸ್ತ್ರಗಳನ್ನು ವಿಗ್ರಹದೊಂದಿಗೆ ವಿಸರ್ಜಿಸಬಹುದು. ಅಥವಾ ಮನೆಯಲ್ಲಿ ಗೌರವದಿಂದ ಇಟ್ಟುಕೊಂಡು ಕಾಪಾಡಬೇಕು.

ಮನೆಯಲ್ಲಿ ಯಾರಿಗಾದರೂ ಅನಾರೋಗ್ಯವುಂಟಾದಾಗ ಈ ವಸ್ತ್ರವನ್ನು ಅವರ ತಲೆಯ ಬಳಿ ಇಡುವದರಿಂದ ಖಾಯಿಲೆ ಪರಿಹಾರವಾಗುತ್ತದೆ, ಯಾವುದೇ ಮಹತ್ತ್ವದ ಕೆಲಸವನ್ನು ಪ್ರಾರಂಭಿಸುವ ಮುನ್ನ ಈ ವಸ್ತ್ರವನ್ನು

ತಲೆಯ ಮೇಲಿಟ್ಟುಕೊಂಡು ಗೌರವಿಸಿ ಹೊರಡುವದರಿಂದ ವಿಘ್ನಗಳು ಪರಿಹಾರವಾಗುತ್ತವೆ.

ಈ ವಸ್ತ್ರದ ಆವಶ್ಯಕತೆಯಿರುವವರಿಗೆ ದಾನವನ್ನೂ ಸಹ ಮಾಡಬಹುದು.

## ಯಜ್ಞೋಪವೀತ

ಗಣಪತಿಗೆ ಸಮರ್ಪಿಸಲು ಎರಡು ಯಜ್ಞೋಪವೀತ. ಗಣಪತಿಗೆ ಮದುವೆಯಾಗಿದೆ ಎನ್ನುವದು ಶ್ರೀಮದಾಚಾರ್ಯರ ಸಿದ್ಧಾಂತ[3]. ಹೀಗಾಗಿ ಗೃಹಸ್ಥರು ಧರಿಸುವಂತೆ ಎರಡು ಎಳೆಯ ಜನಿವಾರವನ್ನು ಗಣಪತಿಗೆ ಸಮರ್ಪಿಸಬೇಕು.

ಒಂದು ಎಳೆಯನ್ನು ಸಮರ್ಪಿಸಿ ಗಣಪತಿಯ ಬ್ರಹ್ಮಚಾರಿಯ ರೂಪವನ್ನು ಪೂಜಿಸುತ್ತಿದ್ದೇವೆ

---

[3] ಬನ್ನಂಜೆ ಇಲ್ಲಿಯೂ ಸಮಸ್ಯೆ ಉಂಟು ಮಾಡಿದ್ದಾರೆ. ಗಣಪತಿಗೆ ಮದುವೆಯೇ ಆಗಿಲ್ಲ ಎನ್ನುತ್ತಾರೆ. ಶ್ರೀಮದಾಚಾರ್ಯರ ವಚನದ ಆಧಾರದಿಂದ ಗಣಪತಿಗೆ ಮದುವೆಯಾಗಿರುವದನ್ನು ಶ್ರೀ ಹರಿಕಥಾಮೃತಸಾರದ ಗಣಪತಿಸ್ತೋತ್ರಸಂಧಿಯ ಉಪನ್ಯಾಸದಲ್ಲಿ ಸಮರ್ಥಿಸಿದ್ದೇನೆ. ಕೇಳಿ.

ಎಂದು ಭಾವಿಸಲು ಅಡ್ಡಿಯಿಲ್ಲ. ಕಾರಣ ಗಣಪತಿಗೆ ಬ್ರಹ್ಮಚಾರಿಯ ರೂಪವೂ ಇದೆ.  ಆದರೆ ಗಣಪತಿಗೆ ಮದುವೆಯೇ ಆಗಿಲ್ಲ ಎನ್ನುವದು ಮಧ್ವಸಿದ್ಧಾಂತಕ್ಕೆ ವಿರುದ್ಧವಾದದ್ದು.

## ನೈವೇದ್ಯದ ಪದಾರ್ಥಗಳು

21 ಕಡುಬುಗಳು, ವಿಧವಿಧ ಭಕ್ಷ್ಯಗಳು, ಹಣ್ಣು, ತಾಂಬೂಲ ಮತ್ತು ನೀರಿನ ಕಲಶ.

ಬೆಳಿಗ್ಗೆ ದೇವರ ಪೂಜೆಯನ್ನು ಮುಗಿಸಿ ದೇವರಿಗೆ, ಲಕ್ಷ್ಮೀದೇವಿಗೆ, ಮುಖ್ಯಪ್ರಾಣದೇವರಿಗೆ ಮತ್ತು ಭಾರತೀದೇವಿಗೆ ಸಮರ್ಪಿಸಿರುವ ನೈವೇದ್ಯವನ್ನು ಗಣಪತಿಯ ನೈವೇದ್ಯಕ್ಕೆ ಇಟ್ಟುಕೊಳ್ಳಬೇಕು.

ಒಂದು ಎಲೆಯಲ್ಲಿ,  ಗಣಪತಿಗೆ ಸಮರ್ಪಿಸಲೆಂದೇ 21 ಕಡುಬುಗಳನ್ನು,  ಮತ್ತೊಂದು ಎಲೆಯಲ್ಲಿ ಎಲ್ಲ ಅಡಿಗೆಯನ್ನೂ, ಮಗದೊಂದು ತಟ್ಟೆಯಲ್ಲಿ ಹಣ್ಣು ತಾಂಬೂಲಗಳನ್ನಿಟ್ಟು, ಒಂದು ಕಲಶದಲ್ಲಿ ಕುಡಿಯಲು ನೀರನ್ನಿಟ್ಟು ನೈವೇದ್ಯ ಮಾಡಬೇಕು.

ಗಣಪತಿಗೆ ನೈವೇದ್ಯ ಮಾಡಿದ ಯಾವುದೇ ಪದಾರ್ಥವನ್ನೂ, ಗಣಪತಿಗೆ ಅಭಿಷೇಕ ಮಾಡಿದ ಪಂಚಾಮೃತ-ತೀರ್ಥಗಳನ್ನೂ ನಾವು ಸ್ವೀಕರಿಸುವಂತಿಲ್ಲ. ಹೀಗಾಗಿ ಗಣಪತಿಗೆ ಸಮರ್ಪಿಸಿದ ಪದಾರ್ಥಗಳನ್ನು ಗೋಗ್ರಾಸವನ್ನಾಗಿ ನೀಡಿಬಿಡಬೇಕು. ನಾವು ಸ್ವೀಕರಿಸುವ ಪದಾರ್ಥಗಳು ಶ್ರೀಹರಿ, ಲಕ್ಷ್ಮೀ, ಮುಖ್ಯಪ್ರಾಣ ಮತ್ತು ಭಾರತೀದೇವಿಯರಿಗೆ ಮಾತ್ರ ನೈವೇದ್ಯವಾಗಿರಬೇಕು ಎನ್ನುವದು ಗಮನದಲ್ಲಿರಬೇಕು.

## ವಾಯನದಾನ

ವ್ರತಗಳನ್ನು ಮಾಡಿದಾಗ ಅದರ ಫಲಪ್ರಾಪ್ತಿಗಾಗಿ ಉತ್ತಮ ಜ್ಞಾನಿಗಳಿಗೆ ನೀಡುವ ಉಪಾಯನವನ್ನು ವಾಯನ ಎನ್ನುತ್ತಾರೆ.

ನಾವು ಮಾಡಿದ ವ್ರತಗಳಲ್ಲಿ ಲೋಪದೋಷಗಳಿದ್ದೇಇರುತ್ತವೆ. ಶ್ರೇಷ್ಠ ವಿಷ್ಣುಭಕ್ತರಾದ ಸಜ್ಜನರಾದ ಜ್ಞಾನಿಗಳು “ನೀವು ಮಾಡಿದ ಕರ್ಮ ಪೂರ್ಣವಾಗಲಿ” ಎಂದು

ಆಶೀರ್ವದಿಸಿದರೆ ಲೋಪದೋಷಗಳು ಪರಿಹಾರವಾಗುತ್ತವೆ. ಹೀಗಾಗಿ ಯಾವುದೇ ವ್ರತ ಮುಗಿದ ನಂತರ ಅಕ್ಕಿ, ಬೇಳೆ, ತೆಂಗಿನಕಾಯಿ, ಫಲಗಳು, ದಕ್ಷಿಣೆಗಳನ್ನು ನಮ್ಮನಮ್ಮ ಶಕ್ತಿಗೆ ಅನುಸಾರವಾಗಿಟ್ಟು ಉತ್ತಮ ಜ್ಞಾನಿಗಳ ಮನೆಗೆ ಹೋಗಿ ನೀಡಿ (ಸಾಧ್ಯವಾದರೆ ಮನೆಗೇ ಅವರನ್ನು ಗೌರವದಿಂದ ಅಹ್ವಾನಿಸಬೇಕು) ನಮಸ್ಕರಿಸಿ ವ್ರತ ಸಂಪೂರ್ಣವಾಗಲಿ ಎಂದು ಆಶೀರ್ವದಿಸಿ ಎಂದು ಪ್ರಾರ್ಥಿಸಬೇಕು.

## ಪುರೋಹಿತರಿಗೆ ದಕ್ಷಿಣಾದಾನ

ಫಲ, ತಾಂಬೂಲ ಗಳ ಸಮೇತವಾಗಿ ದಕ್ಷಿಣೆಯನ್ನು ನೀಡಿ ಪುರೋಹಿತರಿಗೆ ನಮಸ್ಕರಿಸಬೇಕು.

ದಕ್ಷಿಣೆ ಮಹಾಲಕ್ಷ್ಮೀದೇವಿಯ ಸನ್ನಿಧಾನಯುಕ್ತವಾದದ್ದು. ಮಾಡುವ ವ್ರತ, ದಾನಗಳಲ್ಲಿ ಶ್ರೀಹರಿಯ ಸನ್ನಿಧಾನ. ಇವೆರಡನ್ನೂ ಕೂಡಿಸಿದಾಗ ಮಾತ್ರ ಫಲಪ್ರಾಪ್ತಿಯಾಗುತ್ತದೆ. ಹೀಗಾಗಿ ಯಾವುದೇ ವ್ರತವನ್ನೂ, ದಾನವನ್ನೂ, ದಕ್ಷಿಣೆಯ ಸಮೇತವಾಗಿಯೇ ಮಾಡಬೇಕು.

ದಕ್ಷಿಣೆ ಇಷ್ಟು ಎಂತಲ್ಲ. ಶ್ರೀಹರಿ ಎಷ್ಟು ಶಕ್ತಿ ನೀಡಿದ್ದಾನೆಯೋ ಅಷ್ಟು. ಅವಲಕ್ಕಿಗೆ ಪ್ರೀತನಾದ ಒಡೆಯ ನೀಡುವ ಪದಾರ್ಥವನ್ನು ನೋಡುವದಿಲ್ಲ, ಅದರ ಹಿಂದಿರುವ ಭಾವಕ್ಕೆ ಒಲಿಯುತ್ತಾನೆ.

ಪುರೋಹಿತರನ್ನು ಕರೆಯಿಸದೇ ಸ್ವಯಂ ಪೂಜೆಯನ್ನು ಮಾಡಿದ್ದರೆ ಮೇಲೆ ಹೇಳಿದ ವಾಯಿನದಾನವನ್ನು ಉತ್ತಮ ಜ್ಞಾನಿಗಳಿಗೆ ಮಾಡಿದರೆ ಸಾಕು.

## ಸಮಾರಾಧನೆ

ಯಾವುದೇ ವ್ರತದಲ್ಲಿಯೂ ಅನ್ನದಾನ ನಡೆಯಲೇ ಬೇಕು. ಉತ್ತಮ ಜ್ಞಾನಿಗಳನ್ನು ಮನೆಗೆ ಕರೆಯಿಸಿ ಅಡಿಗೆ ಮಾಡಿ ಬಡಿಸುವದು ಶ್ರೇಷ್ಠತಮವಾದ ಸತ್ಕರ್ಮ.

ಉತ್ತಮ ಜ್ಞಾನಿಗಳು ಅಪೇಕ್ಷೆ ಪಡುವ ಶುದ್ಧಿಯನ್ನು ಮನೆಯಲ್ಲಿ ಮಾಡಲು ಸಾಧ್ಯವಿಲ್ಲದ ಪಕ್ಷದಲ್ಲಿ ಅಂತಹವರಿಗೆ ಹಣವನ್ನಾಗಲೀ ಅಥವಾ ಅಡಿಗೆಯ ಪದಾರ್ಥಗಳನ್ನಾಗಲೀ ನೀಡಿ ವ್ರತದ ದಿವಸದಂದು

ಆ ಪದಾರ್ಥಗಳಿಂದ ಅಡಿಗೆ ಮಾಡಿಕೊಳ್ಳಲು ವಿನಂತಿಸಿಕೊಳ್ಳಬೇಕು.

ನಿಮ್ಮ ಮನೆಯಲ್ಲಿ ಮಾಡುವಷ್ಟು ಶುದ್ಧಿಯಲ್ಲಿಯೇ ಊಟ ಮಾಡುವಂತಹ ವಿಷ್ಣುಭಕ್ತರಾದ ಸಜ್ಜನರಾದ ಬ್ರಾಹ್ಮಣರನ್ನು — ಕನಿಷ್ಠ ಪಕ್ಷ ಒಬ್ಬ ದಂಪತಿಗಳನ್ನಾದರೂ ಅಮಂತ್ರಿಸಿ — ಅನ್ನದಾನವನ್ನು ಮಾಡಬೇಕು. ಆ ನಂತರ ಬಂಧು ಬಾಂಧವರ ಜೊತೆಯಲ್ಲಿ ಕುಳಿತು ಪರಮಾತ್ಮನಿಗೆ ನಿವೇದಿತವಾದ ಪದಾರ್ಥಗಳನ್ನು ಸಂಭ್ರಮದಿಂದ ಉಣ್ಣಬೇಕು.

## ಸಾಯಂಪೂಜೆ

ಸಂಜೆಯ ವೇಳೆ ಮತ್ತೊಮ್ಮೆ ಗಣಪತಿಗೆ ಪೂಜೆಯನ್ನು ಸಲ್ಲಿಸಿ, ಸಂಗೀತ ನೃತ್ಯ ಮುಂತಾದ ಕಲೆಗಳಲನ್ನು ಕಲಿತಿದ್ದಲ್ಲಿ ಅದನ್ನು ಆ ಒಡೆಯನ ಮುಂದೆ ಸಮರ್ಪಿಸಿಕೊಳ್ಳಬೇಕು.

ಸಂಜೆಯ ಹಣ್ಣು, ಹಾಲಿನವಲಕ್ಕಿ ಮುಂತಾದ ಪದಾರ್ಥಗಳನ್ನು ನೈವೇದ್ಯ ಮಾಡಿ ಗೋವುಗಳಿಗೆ ನೀಡಬೇಕು.

## ವಿಸರ್ಜನೆ

ಹೀಗೆ ಗಣಪತಿಯನ್ನು ಎಷ್ಟು ದಿವಸ ಪೂಜಿಸಬೇಕು ಎಂದು ಆ ವರ್ಷದ ಪಂಚಾಂಗ ತಿಳಿಸುತ್ತದೆಯೋ ಅಷ್ಟು ದಿವಸ ಪೂಜಿಸಿ, ವಿಸರ್ಜನೆಯ ದಿವಸ ಉದ್ವಾಸನವನ್ನು ಮಾಡಿ ಗಣಪತಿಯ ಪ್ರತಿಮೆಯನ್ನು ಕೆರೆ, ನದಿಗಳಲ್ಲಿ ವಿಸರ್ಜಿಸಬೇಕು.[4]

ಆ ನಂತರ ಮನೆಗೆ ಬಂದು ದೇವರಿಗೆ ನಮಸ್ಕಾರ ಮಾಡಿ ಗಣಪತಿಯ ಪೂಜೆಯ ಸಿದ್ಧತೆಯಿಂದ ಆರಂಭಿಸಿ ವಿಸರ್ಜನೆಯ ವರೆಗಿನ ಎಲ್ಲ ಸತ್ಕರ್ಮಗಳನ್ನೂ, ಗುರುಗಳಲ್ಲಿ, ಗುರುಪರಂಪರೆಯಲ್ಲಿ, ತತ್ವಾಭಿಮಾನಿದೇವತೆಗಳಲ್ಲಿ, ಗಣಪತಿಯಲ್ಲಿ, ಪಾರ್ವತೀಪತಿ ರುದ್ರದೇವರಲ್ಲಿ, ಮುಖ್ಯಪ್ರಾಣದೇವರಲ್ಲಿ ನೆಲೆನಿಂತ ಶ್ರೀ ಭೂಸಮೇತನಾದ ಅಂತರ್ಯಾಮಿಗೆ ಭಕ್ತಿಯಿಂದ ಸಮರ್ಪಿಸಬೇಕು.

---

[4] ಗಣಪತಿಯ ವಿಸರ್ಜನೆಯ ಸಂದರ್ಭದಲ್ಲಿ ಇರಬೇಕಾದ ಎಚ್ಚರಗಳ ಬಗ್ಗೆ, ಹಾಗೂ ವಿಸರ್ಜಿಸುವ ಪರಿಶುದ್ಧವಾದ ಕ್ರಮದ ಕುರಿತು VNA129 ನೆಯ ಲೇಖನದಲ್ಲಿ ವಿವರಿಸಿದ್ದೇನೆ. ಓದಿ.

ಗಣಪತಿಯ ಪೂಜೆ ಮಾಡಬೇಕಾದರೆ, ನಿರಂತರ ವಿಷ್ಣುಸ್ಮರಣೆಯಿರಲಿ. ಭಗವಂತನೇ ಗಣಪತಿಯಲ್ಲಿ ನಿಂತು ನಮ್ಮನ್ನು ಅನುಗ್ರಹಿಸುತ್ತಾನೆ, ಭಗವಂತ ಶ್ರೇಷ್ಠ ವಿಭೂತಿರೂಪದ ಸನ್ನಿಧಾನ ಗಣಪತಿಯಲ್ಲಿದೆ, ಗಣಪತಿ ತನ್ನ ಹಿರಿಯ ದೇವತೆಗಳ ಅಧೀನ ಎಂಬ ಪರಿಶುದ್ಧ ಚಿಂತನೆಗಳು ನಿಮ್ಮ ಮನಸ್ಸಿನಲ್ಲಿರಲಿ.

ಗಣಪತಿಯ ಅವನ ಅಂತರ್ಯಾಮಿಯಾದ ಪ್ರಾಣೇಶ ವಿಶ್ವಂಭರನ ಅನುಗ್ರಹದಿಂದ ನಿಮ್ಮೆಲ್ಲರ ಸಾಧನಜೀವನ ನಿರ್ವಿಘ್ನವಾಗಿರಲಿ, ನಿಮ್ಮ ಜೀವನದಲ್ಲಿ ನೆಮ್ಮದಿಯಿರಲಿ ಎಂಬ ಮನಃಪೂರ್ವಕ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

| | |
|---|---|
| **Account Name** | **VISHWANANDINI** |
| **Account Number** | **35368588017** |
| **Account Type** | **Current Account** |
| **Bank** | **State Bank of India** |
| **Branch** | **T. Narasipura, Mysore** |
| **IFSC** | **SBIN0013233** |

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491